# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ

ಅಂಜನಾಪುರ ಉಪ ವಿಭಾಗ

2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/ /2021-22 ದಿನಾಂಕ : 19-06-2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:19-06-2021 ರಂದು ವಾರ್ಡ್ ನಂ.196-ಅಂಜನಾಪುರ ಕೋವಿಡ್ ವಾರ್ ರೂಂ ಕಛೇರಿಯ ಉದ್ಯಾನವನದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

## ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಪ್ರಮೋದ್ ಕುಮಾರ್.ಎನ್.ಜಿ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ವಿ.ತಿಮ್ಮಯ್ಯ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀ ನರೇಶ್.ಬಿ.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 4 | ಶ್ರೀ ಯೋಗೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 5 | ಶ್ರೀ ನವೀನ್ ಬಿ.ಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) | ಹಾಜರಿರುತ್ತಾರೆ |
| 6 | ಬಿ.ಡಿ.ಎ ಅಧಿಕಾರಿಗಳು | ಸಹಾಯಕ ಇಂಜಿನಿಯರ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) | ಹಾಜರಿರುತ್ತಾರೆ. |
| 7 | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿರುತ್ತಾರೆ. |
| 8 | ಶ್ರೀ ಸದಾನಂದ | ಕಂದಾಯ ಪರಿವೀಕ್ಷಕರು | ಗೈರು ಹಾಜರಿರುತ್ತಾರೆ. |
| 9 | ಶ್ರೀ ಶ್ರೀನಿವಾಸ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಗೈರು ಹಾಜರಿರುತ್ತಾರೆ. |
| 10 | | ಪೋಲೀಸ್ ಇಲಾಖೆ | ಗೈರು ಹಾಜರಿರುತ್ತಾರೆ. |
| 11 | | ತೋಟಗಾರಿಕೆ ಅಧಿಕಾರಿಗಳು | ಗೈರು ಹಾಜರಿರುತ್ತಾರೆ. |
| 12 | ಶ್ರೀ ರಮೇಶ್ | ಬೀದಿ ದೀಪಗಳ ನಿರ್ವಹಣೆ | ಹಾಜರಿರುತ್ತಾರೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಜನಾಪುರ ವಾರ್ಡ್ ಸಂಖ್ಯೆ.196ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಪ್ರಮೋದ್ ಕುಮಾರ್.ಎನ್.ಜಿ ರವರು ದಿನಾಂಕ: 19-06-2021 ರಂದು ಶನಿವಾರ 11.00ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ತಿಮ್ಮಯ್ಯ.ವಿ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

1. ಬೀದಿ ದೀಪಗಳ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಯಲ್ಲಿ ಸರಿಯಾಗಿ ನಿರ್ವಹಿಸುತ್ತಿದ್ದು ಸದರಿ ನಿರ್ವಹಣೆಯಲ್ಲಿ ಯಾವುದೇ ಅಡಚಣೆಯಾಗದಂತೆ ಸಂಜೆ ವೇಳೆಯಲ್ಲಿ ಬೀದಿ ದೀಪಗಳನ್ನು ಹೊತ್ತಿಸಲಾಗುತ್ತಿದೆ. ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಗಾಳಿ ಮತ್ತು ಮಳೇಯಿಂದ ಅಲ್ಪ ಸೊಲ್ಪ ತೊಂದರೆ ಉಂಟಾಗುತ್ತಿದ್ದು ಇದನ್ನು ಸರಿಪಡಿಸಲಾಗುವುದು. ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಸಭೆಗೆ ಆಗಮಿಸಿದ ಅಧಿಕಾರಿಗಳ ಪ್ರತಿನಿಧಿಗಳು ಸದರಿ ಮುಂಬರುವ ದೂರಿನ ವಿಷಯವಾಗಿ ಬೀದಿ ದೀಪಗಳ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಸರಿಪಡಿಸಲಾಗುತ್ತದೆ ಎಂದು ಈ ಸಭೆಯಲ್ಲಿ ತಿಳಿಸಿರುತ್ತಾರೆ.

2. ಬೆಸ್ಕಾಂ:-

ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯಲ್ಲಿ ಮಳೆ ಮತ್ತು ಗಾಳಿಯಿಂದ ತೊಂದರೆಯಾಗುತ್ತಿದ್ದು, ಹಾಗೂ ರಸ್ತೆ ಬದಿಯ ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿರುವ ಖಿಡಿಚಿಟಜಜಿಚಿಡಿಟಜಡಿ ಗಳನ್ನು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಲು ಸಭೆಯಲ್ಲಿ ಚರ್ಚಿಸಲಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ದಿನದ ಸಭೆಯಲ್ಲಿ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ಅಧಿಕಾವಾಗುವ ಪ್ರಮೇ ಇದ್ದು ಯಾವುದೇ ತೊಂದರೆಯಾಗದಂತೆ ವ್ಯವಸ್ತಿತವಾಗಿ ಹಾಗೂ ಗಂಭೀರವಾಗಿ ಪರಿಗಣಿಸಿ ಸದರಿ ಬೆಸ್ಕಾಂ ವತಿಯಿಂದ ಸರ್ವಾಜನಿಕರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

**3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:-**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ ಹಾಗೂ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ನಿರ್ವಹಿಸದೇ ಇರುವುದಾಗಿ ಮತ್ತು ಬೀದಿ ದೀಪಗಳ Fittings ಗಳು ಹಾಳಾಗಿದ್ದು, ಸದರಿ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೇ ಇರುವುದು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ ಎಂದು ಹಿಂದಿನ ಸಭೆಯಲ್ಲಿ ತಿಳಿಸಿದ್ದು ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ಸಭೆಯಲ್ಲಿ ಚರ್ಚಿಸಲಾಗಿ ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಮೇಲಾಧಿಕಾರಿಗಳಲ್ಲಿ ಚರ್ಚಿಸಿರುವುದಾಗಿ ಮತ್ತು ಅಂದಾಜು ಪಟ್ಟಿಗಳನ್ನು ಮೇಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸಿರುವುದಾಗಿ ಶ್ರೀ ಕೃಷ್ಣ ನಾಯಕ್, ಸಹಾಯಕ ಅಭಿಯಂತರರು ಇವರು ಸಭೆಯಲ್ಲಿ ತಿಳಿಸಿರುತ್ತಾರೆ.

4. ಘನತ್ಯಾಜ್ಯ ನಿರ್ವಹಣೆ:-

ಕೋವಿಡ್-19ರ ಲಾಕ್‌ಡೌನ್ ಮುಕ್ತಾಯಗೊಂಡ ಪ್ರಯುಕ್ತ ಪೌರಕಾರ್ಮಿಕರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಕಸದ ಸಂಗ್ರಹಣೆಯನ್ನು ಸರ್ಮಪಕವಾಗಿ ನಿರ್ವಹಿಸಲಾಗುವುದು ಮತ್ತು ಮುಂದಿನ ದಿನಗಳಲ್ಲಿ ಕೂಡ ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಗೂ ಘನತ್ಯಾಜ್ಯ ನಿರ್ವಹಣೆಯಲ್ಲಿ ಯಾವುದೇ ದೂರು ಬಾರದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ.

5. ತೋಟಗಾರಿಕೆ ಇಲಾಖೆ:-

ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪಾಧಿಕಾರಕ್ಕೆ ಸಂಬಂಧಪಟ್ಟ ಉದ್ಯಾನವನಗಳು ಇದ್ದು ಇವುಗಳನ್ನು ಸರ್ಮಕವಾಗಿ ನಿರ್ವಹಣೆ ಮಾಡದೇ ಇರುವುದು ಹಾಗೂ ರಾಯಲ್ ಪಾರ್ಕ್ ಪ್ರದೇಶದಲ್ಲಿ ತೆಂಗಿನ ಮರ ಮತ್ತು ಸಪೋಟ ಮರಗಳು ಇರುವುದರಿಂದ ಸದರಿ ಮರಗಳನ್ನು ಹಾಗೂ ಇವುಗಳಿಂದ ಬರುವ ಫಲಗಳನ್ನು ಅನಾಮಿಕರು ಉಪಯೋಗಿಸುತ್ತಿರುವುದಾಗಿ ಕಂಡುಬಂದಿರುವುದಾಗಿ ಮತ್ತು ಉದ್ಯಾನವನಗಳ ತಂತಿ ಬೇಲಿ ತುಕ್ಕು ಹಿಡಿಯುವ ಹಂತದಲ್ಲಿದ್ದು ಇದಕ್ಕೆ ಬಣ್ಣವನ್ನು ಬಳಿಯಲು ರಾಯಲ್ ಪಾರ್ಕ್‌ನ ವೆಲ್‌ಫೇರ್ ಅಸೋಸಿಯೇಷ್‌ನ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ. ಆದ್ದಿರಂದ ಸಂಬಂಧಪಟ್ಟ ತೋಟಗಾರಿಕೆ ಅಧಿಕಾರಿಗಳಿಗೆ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮೇಲಾಧಿಕಾರಿಗಳಿಗೆ ತಿಳಿಸಿ ಇದರ ಬಗ್ಗೆ ಕ್ರಮಕೈಗೊಳ್ಳಲು ಹಿಂದಿನ ಸಭೆಯಲ್ಲಿ ಎಲ್ಲಾ ಸದಸ್ಯರು ಕೋರಿರುತ್ತಾರೆ. ಆದರೆ ಈ ದಿನದ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಗೈರುಹಾಜರಾಗಿರುತ್ತಾರೆ.



Scanned with CamScanner

6. ಕಂದಾಯ ಅಧಿಕಾರಿ:-

ಕಂದಾಯ ಅಧಿಕಾರಿಗಳು ಕೋವಿಡ್-19 ಲಸಿಕೆ ಕಾರ್ಯಕ್ರಮದಲ್ಲಿ ನಿರತರಾಗಿರುವುದರಿಂದ ಸಭೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂಬ ಮಾಹಿತಿಯನ್ನು ನೋಡಲ್ ಅಧಿಕಾರಿ ರವರಿಗೆ ತಿಳಿಸಲಾಗಿರುತ್ತದೆ.

7.ನೋಡಲ್ ಅಧಿಕಾರಿ:-

ಅದರಂತೆ ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕರಾದ ಶ್ರೀ ಪ್ರಮೋದ್ ಕುಮಾರ್ ರವರು ಅಧ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

-ಸಹಿ-
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.196 ಅಂಜನಾಪುರ

-ಸಹಿ-
ಅಧ್ಯಕ್ಷಕರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.196 ಅಂಜನಾಪುರ

Scanned with CamScanner